ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-6 Issue-5, March- April 2025, Pp. 16-24
©*IIMRD*, Mysuru
www.iimrd.com

# ಉರಿಲಿಂಗಪೆದ್ದಿಯ ಪುಣ್ಯಸ್ತ್ರೀ ಕಾಳವ್ವೆಯ ವಚನಗಳಲ್ಲಿ ಜಾತಿ ಮತ್ತು ಧರ್ಮ

**ಡಾ. ಎಸ್.ಡಿ. ಶಶಿಕಲಾ**
ಕನ್ನಡ ಪ್ರಾಧ್ಯಾಪಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

**ಸಾರಾಂಶ: (Abstract)**

*ಹನ್ನೆರಡನೆಯ ಶತಮಾನ ಸಾಮಾಜಿಕ ಸಮಾನತೆಯ ಆಶಯದ ದೃಷ್ಟಿಯಿಂದ ಬಹಳ ಮುಖ್ಯವಾದ ಕಾಲಘಟ್ಟ. ಈ ಶತಮಾನದ ಪೂರ್ವ ಕಾಲಘಟ್ಟದಲ್ಲಿದ್ದ ಸಾಮಾಜಿಕ ಅಸಮಾನತೆ, ಮನುಷ್ಯ ಸಂಬಂಧಗಳಲ್ಲಿದ್ದ ವೈಪರೀತ್ಯಗಳು ಹನ್ನೆರಡನೆಯ ಶತಮಾನದ ಹೊಸ ಸೈದ್ಧಾಂತಿಕತೆಯಿಂದ ರೂಪುಗೊಂಡ ಸಮಾಜಕ್ಕೆ ಕಾರಣವಾದವು. ವೈದಿಕಧರ್ಮದಲ್ಲಿ ಆಚರಣೆಯಲ್ಲಿದ್ದ ವರ್ಣಾಶ್ರಮ ಪದ್ಧತಿಯಿಂದಾಗಿ ಸಮಾಜದಲ್ಲಿ ಬೇರೂರಿದ್ದ ಜಾತಿಪದ್ಧತಿ, ಅಸ್ಪೃಶ್ಯತೆ ಸಮಾಜದಲ್ಲಿದ್ದ ಮನುಷ್ಯರ ನಡುವಿನ ಸಂಬಂಧಗಳ ಬಿರುಕುಗಳಿಗೆ ಕಾರಣವಾದವು. ಸ್ತ್ರೀಯರ ಹುಟ್ಟನ್ನೇ ನಿರಾಕರಿಸಿ ಹುಟ್ಟಿದ ಪುರುಷ ಸಂತಾನದಿಂದಲೇ ಮೋಕ್ಷ ಎಂಬ ನಂಬಿಕೆಯಿಂದ ಪುರುಷ ಪ್ರಾಧಾನ್ಯತೆಗೆ ದೊರೆತ ಪ್ರಾಶಸ್ತ್ಯಗಳು ಲಿಂಗ ಅಸಮಾನತೆಗೆ ಕಾರಣವಾದವು. ಜೈನಧರ್ಮ ಮನುಷ್ಯಬದುಕನ್ನು ಲೌಕಿಕದಿಂದ ಅಲೌಕಿಕದೆಡೆಗೆ ಒಯ್ಯುವ ಧಾವಂತದಲ್ಲಿ ಇಹದ ಬದುಕಿನ ವಿಮುಖತೆಗೆ ಕಾರಣವಾಗಿದ್ದಲ್ಲದೇ ಮಹಿಳೆಯರ ಸ್ಥಾನವನ್ನು ಕಡೆಗಣಿಸಿತು. ಬಸವಪೂರ್ವ ಯುಗದ ಇಂಥ ಸಾಮಾಜಿಕ ಸಂಬಂಧಗಳ ವೈರುಧ್ಯ ಹನ್ನೆರಡನೆಯ ಶತಮಾನದ ನಿಲುವುಗಳಿಗೆ ನಿಚ್ಚಳವಾದ ದಾರಿಯನ್ನು ಹಾಕಿಕೊಟ್ಟಿತು. ಪ್ರಸ್ತುತ ಲೇಖನದಲ್ಲಿ ಉರಿಲಿಂಗಪೆದ್ದಿಯ ಪುಣ್ಯಸ್ತ್ರೀ ಕಾಳವ್ವೆಯ ವಚನಗಳಲ್ಲಿ ಕಂಡುಬರುವ ಜಾತಿ ಮತ್ತು ಧರ್ಮ ಕುರಿತು ಚರ್ಚಿಸಲಾಗಿದೆ.*

**ಮುಖ್ಯಪದಗಳು (Keywords):** ಕನ್ನಡ ಸಾಹಿತ್ಯ, ವಚನ ಸಾಹಿತ್ಯ, ಶಿವಶರಣೆಯರು, ಉರಿಲಿಂಗಪೆದ್ದಿ, ಕಾಳವ್ವೆ, ವ್ರತ, ಭವಿ–ಭಕ್ತ, ಗುರು–ಲಿಂಗ–ಜಂಗಮ.

## ಪೀಠಿಕೆ

ಹನ್ನೆರಡನೆಯ ಶತಮಾನದಲ್ಲಿದ್ದ ಸಾಮಾಜಿಕ ಚಳವಳಿಯ ನೇತಾರರಾಗಿ ಕಾಣಿಸಿಕೊಂಡ ಬಸವಣ್ಣ ಮತ್ತು ಅವರ ಅನುಯಾಯಿಗಳು ಜಾತಿ–ಅಸ್ಪೃಶ್ಯತೆ, ಲಿಂಗಭೇದಗಳಿಂದ ಕೂಡಿದ್ದ ಸಮಾಜದ ಕಲ್ಮಶವನ್ನು ತೊಳೆಯಲು ಕಂಕಣಬದ್ಧರಾದರು. ಮುಮ್ಮಡಿ ತೈಲಪನನ್ನು ಕೊಂದು ಕಲ್ಯಾಣದ ಆಡಳಿತದ ಜವಾಬ್ದಾರಿಯನ್ನು ಹೊತ್ತ ಕಳಚೂರಿ ಬಿಜ್ಜಳನ ಅನ್ಯಾಯ ಬಸವಣ್ಣನವರಿಗೆ ಅನುಕೂಲಕರವಾಗಿ ಪರಿಣಮಿಸಿತು. ಅನ್ಯಾಯ ಮಾಡಿ ಅಧಿಕಾರಕ್ಕೆ ಬರಲು ಬಿಜ್ಜಳನಂಥವರಿಗೆ ಸಾಧ್ಯವಾಗುವುದಾದರೆ

*Please cite this article as:* ಶಶಿಕಲಾ, ಎಸ್.ಡಿ. (2025). ಉರಿಲಿಂಗಪೆದ್ದಿಯ ಪುಣ್ಯಸ್ತ್ರೀ ಕಾಳವ್ವೆಯ ವಚನಗಳಲ್ಲಿ ಜಾತಿ ಮತ್ತು ಧರ್ಮ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 6(5). ಪು.ಸಂ.* 16–24

ನ್ಯಾಯಯುತವಾಗಿ ಸಾಮಾಜಿಕ ಸಮಾನತೆಗಾಗಿ ಹೋರಾಡುವುದು ಯಾವ ರೀತಿಯಲ್ಲೂ ತಪ್ಪಲ್ಲ, ಅಪರಾಧವಲ್ಲ ಎಂಬ ನಿಲುವು ಅವರ ಚಳವಳಿಗೆ ನೈತಿಕ ಸ್ಥೈರ್ಯವನ್ನು ತಂದುಕೊಟ್ಟಿತು. ಇದರ ಮೊದಲ ಹೆಜ್ಜೆಗಳೆಂಬಂತೆ ಸಮಾಜದ ದೃಷ್ಟಿಯಲ್ಲಿ ಕೀಳು ಎನಿಸಿದ ಹಲವು ದೈವಗಳ ಆರಾಧನೆ ಮಾಡುತ್ತಿದ್ದ ತಳಸಮುದಾಯಗಳನ್ನು ಏಕದೇವೋಪಾಸನೆಗೆ ಒಳಪಡಿಸಲಾಯಿತು. ಜಾತಿಗಳು ಮನುಷ್ಯ ನಿರ್ಮಿತವಲ್ಲ ದೈವ ನಿರ್ಮಿತವೆಂಬ ಸುಳ್ಳುಗಳನ್ನು ಹೋಗಲಾಡಿಸಲು ಬದ್ಧರಾದರು. ಅಧಿಕಾರ, ಸಾಮಾಜಿಕ ಸ್ಥಾನಮಾನ, ಹಣ ಮೊದಲಾದ ವಿಚಾರಗಳಲ್ಲಿ ಶ್ರೇಷ್ಠರೆನಿಸಿದ್ದ ರಾಜ, ಬ್ರಾಹ್ಮಣರು, ವರ್ತಕರು ಜನಸಾಮಾನ್ಯರನ್ನು ಆಳಲು ಒಂದಾಗಿದ್ದ ರೀತಿಯನ್ನು ಒಡೆಯಲಾಯಿತು. ರಾಜನಿಗೆ ನಮಸ್ಕರಿಸದೆ ಶಿವನಿಗೆ ಮಾತ್ರ ನಮಸ್ಕರಿಸುವ ಧೋರಣೆಯನ್ನು ತಾಳಲಾಯಿತು. ಹೊಲೆಯನೊಬ್ಬ ಶಿವಭಕ್ತನಾದ ಮೇಲೆ ಅವನೊಂದಿಗಿನ ಸಂಬಂಧವನ್ನು ಪ್ರಶ್ನಿಸುವುದಾದರೆ ಊರನ್ನೇ ಬಿಡುವ ನಿರ್ಧಾರ ಕೈಗೊಳ್ಳಲಾಯಿತು. ಈ ಬಗೆಯಲ್ಲಿ ಸಮಾಜದ ಅಧಿಕಾರರೂಢರನ್ನು ಎದುರು ಹಾಕಿಕೊಳ್ಳುವ ಮೂಲಕ ಪ್ರತಿಭಟನೆಯ ಒಂದು ಮಾದರಿಯನ್ನು ರೂಪಿಸಿಕೊಳ್ಳಲಾಯಿತು. ತಳಸಮುದಾಯದಲ್ಲಿ ಆಚರಣೆಯಲ್ಲಿದ್ದ ಬಾಯಿಗೆ ಬೀಗ ಹಾಕುವ, ಮಲದ ಬುಟ್ಟಿ ಹೊರುವ ಪದ್ಧತಿ ಮೊದಲಾದ ಅನಾಗರಿಕ, ಜಾತೀಯ ಆಚರಣೆಗಳನ್ನು ನಿರಾಕರಿಸಲಾಯಿತು. ಹೀಗೆ ಹನ್ನೆರಡನೆಯ ಶತಮಾನ ಸಾಮಾಜಿಕ ಮತ್ತು ಸಾಂಸ್ಕೃತಿಕ ಆಂದೋಲನವಾಗಿ ಮಾರ್ಪಟ್ಟಿತು. ಸಮಾಜದ ದೃಷ್ಟಿಯಲ್ಲಿ ಆ ಕಾಲಕ್ಕೆ ಹೀನ ಎನ್ನಿಸಿದ್ದ ತಳಸಮುದಾಯದವರ ಆಚರಣೆಗಳನ್ನು ಅನಿವಾರ್ಯವಾಗಿ ತಡೆಯುವ ಮೂಲಕ ಆ ಸಮುದಾಯವನ್ನು ಉನ್ನತೀಕರಿಸುವ ಅಗತ್ಯವನ್ನು ಬಸವಣ್ಣನವರು ಮನಗಂಡಿದ್ದರು. ಇದರ ಪರಿಣಾಮವಾಗಿ ಬಸವಣ್ಣನವರು ರೂಪಿಸಿದ ಮಹಾಮನೆಯ ಅನುಭವ ಮಂಟಪದಲ್ಲಿ ಜಾತಿಭೇದವಿಲ್ಲದೆ, ವೃತ್ತಿಭೇದವಿಲ್ಲದೆ, ಲಿಂಗಭೇದವಿಲ್ಲದೆ ಎಲ್ಲ ಸಮುದಾಯದವರು, ಏಕದೇವೋಪಾಸನೆಯಡಿಯಲ್ಲಿ ಒಂದಾದರು. ತಮ್ಮ ಅನುಭವಗಳ ವಿನಿಮಯವನ್ನು ವಚನಗಳ ಮೂಲಕ ಮಾಡಿಕೊಂಡರು. ಶಿವಭಕ್ತಿಯೊಂದಿಗೆ ಬಸವ ಪೂರ್ವಕಾಲದ ಡಾಂಭಿಕತೆಯನ್ನು, ಮೌಢ್ಯವನ್ನು ಟೀಕಿಸಿದರು. ಅದಕ್ಕೆ ಅಗತ್ಯವಿದ್ದ ಸಂಸ್ಕೃತದ ಭಾಷಿಕ ಜ್ಞಾನವನ್ನು ಹೊಂದುವುದರ ಜೊತೆಗೆ ವೇದ, ಉಪನಿಷತ್ತು, ಶಾಸ್ತ್ರ, ಪುರಾಣ, ಆಗಮಗಳ ವಿಚಾರಗಳನ್ನು ತಮ್ಮ ಅರಿವಿನ ತೆಕ್ಕೆಗೆ ತೆಗೆದುಕೊಂಡರು. ಆ ಮೂಲಕ ವೈದಿಕ, ಜೈನಧರ್ಮಗಳ ತಾತ್ವಿಕತೆಯನ್ನು ಪ್ರಶ್ನಿಸುವ, ಟೀಕಿಸುವ, ಪ್ರತಿಭಟಿಸುವ ಮನೋಧರ್ಮವನ್ನು ವಚನಗಳ ಮೂಲಕ ಪ್ರಕಟಪಡಿಸಿದರು. ಆ ಮಟ್ಟಿಗಿನ ಪ್ರಬುದ್ಧತೆ ತಳಸಮುದಾಯದಿಂದ ಬಂದ ವಚನಕಾರರಲ್ಲಿ ಕಾಣಬಹುದು. ಇಂಥ ತಳಸಮುದಾಯದಿಂದ ಬಂದ ವಚನಕಾರ್ತಿ ಉರಿಲಿಂಗಪೆದ್ದಿಯ ಪತ್ನಿ ಕಾಳವ್ವೆ.

ಕಾಳವ್ವೆ ಅಸ್ಪೃಶ್ಯ ಸಮುದಾಯದಿಂದ ಬಂದವಳು. 1180ರಲ್ಲಿದ್ದ ಕಾಳವ್ವೆ ಮಹಾರಾಷ್ಟ್ರದ ನಾಂಥೇಡ್ ಜಿಲ್ಲೆಯ ಕಂಧಾರ ಅಥವಾ ಕಂದಾಹರ್ ಗ್ರಾಮಕ್ಕೆ ಸೇರಿದವಳು. ಅಸ್ಪೃಶ್ಯತೆ ಮತ್ತು ಬಡತನದಿಂದ ನಲುಗಿದ್ದ ಕಾಳವ್ವೆ ಕರ್ನಾಟಕದ ಶರಣಾಂದೋಲನಕ್ಕೆ ಒಲಿದು ಕಲ್ಯಾಣಕ್ಕೆ ಬಂದು ಶಿವಧ್ಯಾನ ಹೊಂದಿ ವಚನ ರಚನೆಗೆ ತೊಡಗಿದವಳು. ಅವಳ ತಿಳಿವಳಿಕೆ, ಜ್ಞಾನ, ಪಾಂಡಿತ್ಯ ಇವುಗಳಿಗೆ ಕಾರಣನಾದವನು ಅವಳ ಪತಿ ಪೆದ್ದಣ್ಣ. ಮೊದಲಿಗೆ ಕಳ್ಳತನ ಮಾಡುತ್ತಿದ್ದ ಪೆದ್ದಣ್ಣ ಮನೆಯೊಂದರ ಕಳ್ಳತನಕ್ಕಾಗಿ ಹೊಂಚು ಹಾಕುತ್ತಿದ್ದಾಗ ಅಲ್ಲಿ

ಉರಿಲಿಂಗ ದೇವರು ಶಿಷ್ಯ ಸೂರಯ್ಯನಿಗೆ ಶಿವದೀಕ್ಷೆ ಕೊಡುತ್ತಿದ್ದುದನ್ನು ನೋಡುತ್ತಾನೆ. ಅದನ್ನು ನೋಡನೋಡುತ್ತಲೇ ಪೆದ್ದಣ್ಣ ಮನಃಪರಿವರ್ತನೆಗೆ ಒಳಗಾಗುತ್ತಾನೆ. ಅನಂತರ ಉರಿಲಿಂಗದೇವರಿಂದ ಲಿಂಗದೀಕ್ಷೆ ಪಡೆದು ಸದ್ಭಕ್ತನಾಗುವುದರೊಂದಿಗೆ ಸಂಸ್ಕೃತ–ಕನ್ನಡ ಭಾಷಾ ಪಾಂಡಿತ್ಯವನ್ನು ಗಳಿಸುತ್ತಾನೆ. ಪತಿಯಾದ ಈತನಿಂದಲೇ ಕಾಳವ್ವೆ ಸಂಸ್ಕೃತ–ಕನ್ನಡ ಭಾಷಾ ಪಾಂಡಿತ್ಯವನ್ನು ಗಳಿಸಿ 'ಉರಿಲಿಂಗಪೆದ್ದಿಗಳರಸ' ಎಂಬ ವಚನಾಂಕಿತವನ್ನಿಟ್ಟುಕೊಂಡು ವಚನಗಳನ್ನು ರಚಿಸಿದ್ದಾಳೆ. ಅವಳು ರಚಿಸಿದ ಹದಿಮೂರು ವಚನಗಳು ಸಂಖ್ಯೆಯಲ್ಲಿ ಕಡಿಮೆಯಾದರೂ ಸತ್ವದಲ್ಲಿ ಮಹತ್ತನ್ನು ಸಾಧಿಸಿವೆ.

ಭಕ್ತ–ಕಾಯಕ–ಭವ–ಮುಕ್ತಿ ಇವುಗಳನ್ನು ಕುರಿತ ತಾತ್ವಿಕ ಜಿಜ್ಞಾಸೆಯನ್ನು ಕಾಳವ್ವೆ ತನ್ನ ವಚನವೊಂದರಲ್ಲಿ ಹೀಗೆ ಹೇಳಿದ್ದಾಳೆ.

***"ಕೃತ್ಯ ಕಾಯಕವಿಲ್ಲದವರು ಭಕ್ತರಲ್ಲ***
***ಸತ್ಯಶುದ್ಧವಿಲ್ಲದುದು ಕಾಯಕವಲ್ಲ***
***ಆಸೆಯೆಂಬುದು ಭವದ ಬೀಜ***
***ನಿರಾಸೆಯೆಂಬುದು ನಿತ್ಯಮುಕ್ತಿ***
***ಉರಿಲಿಂಗಪೆದ್ದಿಗಳರಸನಲ್ಲಿ ಸದರವಲ್ಲ ಕಾಣವ್ವಾ"***

ಕಾಯಕವನ್ನು ಮಾಡಬೇಕಲ್ಲಾ ಎಂದು ಮಾಡುವುದಲ್ಲ, ಅದರಲ್ಲಿ ಶ್ರದ್ಧೆ, ನಿಷ್ಠೆ ಎಂಬುದು ಇರಬೇಕು. ಕಾಯಕವನ್ನು ಮನಸೋ ಇಚ್ಛೆ ಮಾಡುವುದಲ್ಲ. ಮನಸ್ಸಿಟ್ಟು ಮಾಡಬೇಕು. ಹಾಗೆ ಕಾಯಕ ಮಾಡುವವನು ನಿಜವಾದ ಭಕ್ತ. ಇಂಥ ಭಕ್ತ ಸತ್ಯಶುದ್ಧಿಯಿಂದ ಕಾಯಕವನ್ನು ಮಾಡಬೇಕು. ಹಾಗೆ ಮಾಡದ ಕಾಯಕ ನಿಜವಾದ ಕಾಯಕವಲ್ಲ. ಪ್ರಾಮಾಣಿಕವಾಗಿ ನೈತಿಕ ನಿಷ್ಠೆಯಿಂದ ಭಕ್ತನೊಬ್ಬ ಮಾಡುವ ಕಾಯಕವೇ ನಿಜವಾದ ಕಾಯಕ. ಕಾಳವ್ವೆ ಇಲ್ಲಿ ಭಕ್ತನ ವ್ಯಕ್ತಿತ್ವಕ್ಕೂ ಮತ್ತು ಆತ ಮಾಡುವ ಕಾಯಕಕ್ಕೂ ಇರುವ ಸಂಬಂಧದ ಸ್ವರೂಪವನ್ನು ಅತ್ಯಂತ ನಿಷ್ಠುರತೆಯಿಂದ ಹೇಳುತ್ತಾಳೆ. 'ಆಸೆಯೆಂಬುದು ಭವದ ಬೀಜ' ಎಂದು ಆಕೆ ಹೇಳುವಲ್ಲಿ ಹಣದ ಅಥವಾ ಮತ್ಯಾವುದೋ ಆಸೆಯಿಂದ ಮಾಡುವ ಕಾಯಕ. ಈ ಲೌಕಿಕ ಸೆಳೆತಗಳಿಗೆ ಬೀಜಪ್ರಾಯವಾಗುತ್ತದೆ. ಹಾಗಾಗಿ ಲೌಕಿಕ ಬಂಧನಗಳಿಗೆ ಸಿಲುಕದೇ ಇರಬೇಕಾದರೆ ಆಸೆಯಿಂದ ಕಾಯಕ ಮಾಡದೆ ಸತ್ಯಶುದ್ಧತೆಯಿಂದ ಮಾಡಬೇಕು. ಈ ಮಾತನ್ನು ಅಪಾರ ಜ್ಞಾನವನ್ನು ಸಂಪಾದಿಸಿದ್ದ ಕಾಳವ್ವೆ ಕೇವಲ ಭಕ್ತರನ್ನು ಕುರಿತು ಹೇಳುತ್ತಿದ್ದಾಳೆ ಎಂದೆನಿಸುವುದಿಲ್ಲ. ಬಸವಪೂರ್ವಯುಗದ ಹತ್ತನೆಯ ಶತಮಾನ ವೀರಯುಗವಾಗಿತ್ತು. ಈ ವೀರಯುಗಕ್ಕೆ ಪ್ರತಿಕ್ರಿಯೆಯಾಗಿಯೂ ಈ ಮಾತುಗಳಿವೆ ಎನಿಸುತ್ತದೆ. ವೀರಯುಗದ ರಾಜರಿಗೆ ಜನಸಾಮಾನ್ಯರ ಕಾಯಕಕ್ಕಿಂತ ಬಹುಮುಖ್ಯ ಕಾಯಕ ಅಥವಾ ಉದ್ಯೋಗವೆಂದರೆ ಅದು ಯುದ್ಧೋದ್ಯೋಗ. ಸದಾ ಯುದ್ಧದ ಕಾಯಕದಲ್ಲಿ ತೊಡಗಿರುತ್ತಿದ್ದ ರಾಜರ ಆಸೆ ಸಾಮ್ರಾಜ್ಯ ವಿಸ್ತರಣೆ. ಇಂಥದ್ದೊಂದು ಆಸೆ ಅವರ ಉದ್ಯೋಗದ ಹಿಂದೆ ಇದ್ದದ್ದರಿಂದಲೇ ಭವ ಬಂಧನಕ್ಕೆ ಒಳಗಾಗಿದ್ದರು. ಅದರಿಂದ ಹೊರಬರಲು ಕಷ್ಟಸಾಧ್ಯವಾಗಿತ್ತು. ಹೀಗಾಗಿಯೇ ಕಾಳವ್ವೆ ಆಸೆಯಿಂದ ಮಾಡುವ ಉದ್ಯೋಗ ಭವದ ಮೇಲಿನ ಮೋಹಕ್ಕೆ ಕಾರಣವಾಗುತ್ತದೆ ಎಂದಿದ್ದಾಳೆ. ಅಷ್ಟೇ ಅಲ್ಲದೆ 'ನಿರಾಸೆಯೆಂಬುದು ನಿತ್ಯಮುಕ್ತಿ' ಎನ್ನುವ ಅವಳ ಮಾತು ಮತ್ತೂ ಅರ್ಥಗರ್ಭಿತವಾಗಿದೆ. ಆಸೆಯನ್ನು ತ್ಯಜಿಸಿ ಮಾಡುವ

ಕಾಯಕದಿಂದ ಮುಕ್ತಿ ಎಂಬ ಮಾತು ಗಳಿಕೆಯ, ಆಯ–ವ್ಯಯದ ತಾಕಲಾಟಗಳ ಭಯದ ಸಂದರ್ಭಗಳಿಂದ ನಿತ್ಯವೂ ಮುಕ್ತವಾಗಿ ಬದುಕುವ ರೀತಿ ಮುಕ್ತಿಗೆ ದಾರಿಯಾಗುತ್ತದೆ. ಆಸೆಯೇ ದುಃಖಕ್ಕೆ ಮೂಲ ಎಂಬ ಬೌದ್ಧಯುಗದ ಬುದ್ಧನ ನಿಲುವನ್ನು ಎತ್ತಿ ಹಿಡಿದಿದ್ದಾಳೆ.

ಭಕ್ತನ ಸ್ವರೂಪವನ್ನು ಕಾಳವ್ವೆ ಪರಿಪರಿಯಾಗಿ ವಿವರಿಸಿದ್ದಾಳೆ. ಈ ಹಿನ್ನೆಲೆಯಲ್ಲಿ ಢೋಂಗಿ ಭಕ್ತರ ಮುಖವಾಡಗಳನ್ನು ಕಳಚಿಸಿ ನಿಜಭಕ್ತನಾಗಬೇಕಾದವನ ಗುಣ–ಮನೋಧರ್ಮಗಳು ಯಾವುದಿರಬೇಕು ಮತ್ತು ಹೇಗಿರಬೇಕೆಂಬುದನ್ನು ತಿಳಿಸಿದ್ದಾಳೆ.

***"ತೂಬರದ ಬಳ್ಳಿಯಂತೆ ಉರಿವಾತ ಭಕ್ತನೆ?***
***ಹುಸಿದು ತಿಂದು ಮಾಡುವಾತ ಭಕ್ತನೆ?***
***ಭಕ್ತರ ಕುಲವನೆತ್ತಿ ನಿಂದಿಸುವಾತ ಭಕ್ತನೆ?***
***ನಿಂದಯಾ ಶಿವಭಕ್ತಾನಾಂ ಕೋಟಿ ಜನನಿ ಸೂಕರಃ***
***ಸಪ್ತ ಜನ್ಮನಿ ಕುಷ್ಠೀಸನ್ ದಾಸಿಗರ್ಭೇಷು ಜಾಯತೇ***
***ಎಂದುದಾಗಿ, ತನ್ನ ಪ್ರಾಣದ ಮೇಲೆ ಬಂದಡೂ ಬರಲಿ ಇವರ ಬಿಡಬೇಕು***
***ಬಿಡದಿರಲು ಉರಿಲಿಂಗ ಪೆದ್ದಿಗಳರಸನೊಲ್ಲನವ್ವಾ"***

ಭಕ್ತನ ಮನಃಸ್ಥಿತಿ ಸದಾ ಪ್ರಶಾಂತವಾಗಿರಬೇಕು. ಎಣ್ಣೆಯಿಲ್ಲದೆ ಧಗಧಗ ಉರಿಯುವ ಕೊಳ್ಳಿಯಂತೆ ಮನಸ್ಸನ್ನು ದಗ್ಧವಾಗಿಸಿಕೊಂಡವನು ಭಕ್ತನೆ? ಎಂದರೆ 'ಅಲ್ಲ' ಎಂಬುದು ಕಾಳವ್ವೆಯ ಉತ್ತರ. ಮನಸ್ಸು ಅಸ್ವಸ್ಥಗೊಂಡಲ್ಲಿ ಭಕ್ತಿಗೆ ಅದೇ ನೆಲೆಯಾಗಲಾರದು. ಸುಳ್ಳನ್ನು ಹೇಳಿ, ತಂದ ಭಿಕ್ಷೆಯಿಂದ ದಾಸೋಹ ಮಾಡುವಾತ ನಿಜವಾದ ಭಕ್ತನಲ್ಲ. ತಾನು ಶ್ರದ್ಧೆಯಿಂದ ಮಾಡಿದ ಕಾಯಕದಿಂದ ಸಂಪಾದಿಸಿದ್ದನ್ನು ಗುರು–ಲಿಂಗ–ಜಂಗಮಗಳ ದಾಸೋಹಕ್ಕೆ ವಿನಿಯೋಗಿಸಬೇಕು ಎನ್ನುತ್ತಾಳೆ ಕಾಳವ್ವೆ. ಭಕ್ತರ ಕುಲವನ್ನು ನಿಂದಿಸುವವನು ಭಕ್ತನೇ? ಎಂದರೆ 'ಅಲ್ಲ' ಎನ್ನುತ್ತಾಳೆ ಕಾಳವ್ವೆ. ಹುಟ್ಟಿನಿಂದ ಯಾವುದೇ ಜಾತಿಯವನನಾದರೂ ಲಿಂಗದೀಕ್ಷೆಯನ್ನು ಹೊಂದಿ ಭಕ್ತನಾದ ಬಳಿಕ ಅವನ ಮೂಲಜಾತಿಯನ್ನು ಹಿಡಿದು ನಿಂದಿಸಬಾರದು, ಹಾಗೆ ನಿಂದಿಸುವವನು ಭಕ್ತನಲ್ಲ. ಹನ್ನೆರಡನೇ ಶತಮಾನದ ಚಳವಳಿಯ ತಾತ್ವಿಕ ವಿಚಾರವೂ ಇದಾಗಿದೆ. ಈ ಶತಮಾನದ ಕ್ರಾಂತಿ ಅಷ್ಟು ಸುಲಭವಾಗಿರಲಿಲ್ಲ. ಅಸ್ಪೃಶ್ಯ ಕುಲದವನು ಭಕ್ತನಾದ ಬಳಿಕ ಆತನನ್ನು ಉಳಿದವರು ನಿಂದಿಸಿರಬಹುದಾದ ಸಾಧ್ಯತೆಯನ್ನೂ ಕಾಳವ್ವೆಯ ಈ ವಚನ ನಿವೇದಿಸುತ್ತದೆ. ಬಹುಶಃ ಈ ಕಾರಣಕ್ಕಾಗಿಯೇ ಕಾಳವ್ವೆ ಭಕ್ತನ ವ್ಯಕ್ತಿತ್ವವನ್ನು ಕುರಿತು ಕಠಿಣವಾಗಿಯೇ ಮಾತನಾಡಿರಬಹುದು. ಭವಿಯೊಬ್ಬ ಭಕ್ತನಾದ ಮೇಲೆ ಆತನನ್ನು ನಿಂದಿಸುವ ವ್ಯಕ್ತಿ ಅಥವಾ ಭಕ್ತನು ಕೋಟಿ ಜನ್ಮಗಳಲ್ಲಿ ಹಂದಿಯಾಗಿ, ದಾಸಿ ಗರ್ಭದಲ್ಲಿ ಹುಟ್ಟಿ, ಕುಷ್ಠರೋಗಿಯಾಗಿ ಜೀವವನ್ನು ಸವೆಸಬೇಕಾಗುತ್ತದೆಯೆಂಬುದನ್ನು ಸಂಸ್ಕೃತ ಶ್ಲೋಕದ ಮೂಲಕ ಶಾಪಾಶಯವನ್ನು ವ್ಯಕ್ತಪಡಿಸುತ್ತಾಳೆ. ಇದು ಅವಳ ಸಂಸ್ಕೃತ ಭಾಷಾ ಪಾಂಡಿತ್ಯದ ದ್ಯೋತಕವಾಗಿದೆ. ಇಲ್ಲಿ ಅವಳು ಹೇಳುವ ಕೋಟಿ ಜನ್ಮ, ಏಳು ಜನ್ಮ ಎಂಬುದು ಮೋಕ್ಷ ರಹಿತವಾದ ಸ್ಥಿತಿಯನ್ನು ಹೇಳುತ್ತದೆ. ಭಕ್ತನೊಬ್ಬನನ್ನು ನಿಂದಿಸಿದ ಪಾಪ ಇಷ್ಟು ಜನ್ಮಗಳನ್ನೆತ್ತಿದರೂ ಮುಗಿಯಲಾರದು. ಹಾಗಾಗಿ ಭಕ್ತನೊಬ್ಬನನ್ನು ನಿಂದಿಸುವ ಮನೋಧರ್ಮವನ್ನು

ಬಿಡಬೇಕೆಂದು ಭವಿಷ್ಯದಲ್ಲಿ ಎದುರಾಗಬಹುದಾದ ತೊಡಕುಗಳ ಬಗ್ಗೆ, ಶಿಕ್ಷೆಯ ಬಗ್ಗೆ ಎಚ್ಚರಿಸುತ್ತಾಳೆ. ಈ ಮಾತು ಜೈನಧರ್ಮ ಮತ್ತು ವೈದಿಕಧರ್ಮದ ವಿಚಾರಗಳಿಗೆ ಕಾಳವ್ವೆ ಕೊಟ್ಟ ಉತ್ತರವೂ ಆಗಿದೆ. ದ್ವಿಜನ್ಮದ ಮತ್ತು ಭವಾವಳಿಗಳ ಪರಿಕಲ್ಪನೆ ಇರುವುದು ಈ ಎರಡೂ ಧರ್ಮಗಳಲ್ಲಿ. ಲೌಕಿಕದಲ್ಲಿ ಮಾಡಿದ ಪಾಪ ದ್ವಿಜನ್ಮಕ್ಕೆ ಕಾರಣವಾದರೆ, ಭೋಗಾಕಾಂಕ್ಷೆಯಲ್ಲಿ ಮುಳುಗಿದ ಜೀವ ಹಲವು ಭವಾವಳಿಗಳಲ್ಲಿ ಬಳಲಬೇಕಾಗುತ್ತದೆ ಎಂಬುದು 'ಜೈನಧರ್ಮದ ವಿಚಾರ. ಅಸ್ಪೃಶ್ಯಳಾದ ಕಾಳವ್ವೆ ಲಿಂಗದೀಕ್ಷೆಯ ಮೂಲಕ ವೀರಶೈವಳಾದ ಮೇಲೆ ಅವಳನ್ನು ನಿಂದಿಸಿರಬಹುದಾದ ಸಾಧ್ಯತೆಯಿದ್ದು ಹೀಗೆ ಹೇಳುವ ಮೂಲಕ ಅನ್ಯ ಧರ್ಮೀಯರಿಗೆ ಅವರದ್ದೇ ಆದ ಧಾರ್ಮಿಕ ಮೌಲ್ಯಗಳ ಮೂಲಕ ಉತ್ತರಿಸುವ ನಿಟ್ಟಿನಲ್ಲಿ ಪರೋಕ್ಷ ಪ್ರತಿಭಟನೆಯನ್ನು ಇಲ್ಲಿ ವ್ಯಕ್ತಪಡಿಸಿದ್ದಾಳೆ. ಅನ್ಯ ಧರ್ಮಗಳು ಅಸ್ಪೃಶ್ಯರನ್ನು ನಡೆಸಿಕೊಂಡಿರುವ ಬಗ್ಗೆ ತನ್ನ ಅಸಹನೆ, ಅಸಮಾಧಾನಗಳನ್ನು ಈ ರೀತಿ ವ್ಯಕ್ತಪಡಿಸಿದ್ದಾಳೆ. ಹಾಗಾಗಿ ಹುಟ್ಟಿನಿಂದ ಭವಿಯಾಗಿದ್ದವನು ಭಕ್ತನಾದ ಮೇಲೆ ಆತ ಕೂಡಾ ಅಂಗಲಿಂಗ ಸಂಬಂಧವನ್ನು ಸಾಧಿಸಲು ಸಾಧ್ಯವಿದೆ. ಇದನ್ನು ಅನ್ಯಧರ್ಮೀಯರು ಅರಿಯಬೇಕಾದ ಅಗತ್ಯ ಮತ್ತು ಅನಿವಾರ್ಯತೆಯನ್ನು ಈ ಬಗೆಯಲ್ಲಿ ನಿವೇದಿಸುತ್ತಾಳೆ. ಇಹ ಮತ್ತು ಪರದ ಪ್ರಯೋಜನ ಪಡೆಯುವಲ್ಲಿ ಅಸ್ಪೃಶ್ಯರೂ ಅರ್ಹರು. ಅದನ್ನವರು ಭಕ್ತಿಯ ಮೂಲಕ ಪಡೆಯಬಲ್ಲರೆಂಬುದನ್ನು ತಿಳಿಸಿದ್ದಾಳೆ. ಭಕ್ತರ ಕುಲವನ್ನೆತ್ತಿ ನಿಂದಿಸುವವರ ಸಂಗವನ್ನು ಪ್ರಾಣಕ್ಕೆ ಆಪತ್ತು ಸಂಭವಿಸಿದರೂ ಬಿಡಬೇಕು. ಹಾಗೆ ಬಿಡದಿದ್ದರೆ ಉರಿಲಿಂಗಪೆದ್ದಿಗಳರಸ ಒಪ್ಪುವುದಿಲ್ಲ ಎನ್ನುತ್ತಾಳೆ. 'ಸಜ್ಜನರ ಸಹವಾಸ ಹೆಜ್ಜೇನು ಸವಿದಂತೆ' ಎಂಬ ಮಾತು ಇಲ್ಲಿ ಅನುಕರಣೀಯವಾದುದು. ಆದರೆ ಹಂದಿ, ದಾಸಿ, ಕುಷ್ಠರೋಗಿ–ಈ ದೃಷ್ಟಾಂತಗಳು ಈ ಮೂವರ ಹುಟ್ಟನ್ನು ಅಪಮೌಲ್ಯಗೊಳಿಸುತ್ತದೆಯಾದರೂ ಹಂದಿಯ ಜನ್ಮ, ದಾಸಿಯ ಜನ್ಮ, ಕುಷ್ಠರೋಗಿಯ ಜನ್ಮ ಕನಿಷ್ಠವೆಂಬ ಜನಸಮುದಾಯದ ಹೇವರಿಕೆಗಳನ್ನು ಅಂಥ ಹೇವರಿಕೆಯ ದೃಷ್ಟಾಂತಗಳಿಂದಲೇ ಹೇಳಿ ತಳಸಮುದಾಯದವನೊಬ್ಬನ ಭಕ್ತಿಗೆ ಆತ್ಯಂತಿಕ ಸ್ಥಾನವನ್ನು ಕಲ್ಪಿಸಿಕೊಟ್ಟಿದ್ದಾಳೆ ಕಾಳವ್ವೆ.

ವ್ರತದ ಆಚರಣೆಯ ಬಗ್ಗೆ ಕಾಳವ್ವೆ ತನ್ನದೇ ಆದ ವ್ಯಾಖ್ಯಾನವನ್ನು ಕೊಡುವುದರ ಮೂಲಕ ಬದುಕಿನ ರೀತಿ–ನೀತಿಗಳನ್ನು ವಿವರಿಸುತ್ತಾಳೆ.

***"ವ್ರತವೆಂಬುದು ನಾಯಕರತ್ನ***
***ವ್ರತವೆಂಬುದು ಸುಪ್ಪಾಣಿಯ ಮುತ್ತು***
***ವ್ರತವೆಂಬುದು ಜೀವದ ಕಳೆ***
***ವ್ರತವೆಂಬುದು ಸುಯಿಧಾನ***
***ವ್ರತ ತಪ್ಪಲು ಉರಿಲಿಂಗ ಪೆದ್ದಿಗಳರಸ ಒಲ್ಲನವ್ವಾ"***

ವ್ರತವನ್ನು ನಾಯಕರತ್ನ, ಸುಪ್ಪಾಣಿಯ ಮುತ್ತು, ಜೀವದ ಕಳೆ, ಸುಯಿಧಾನ ಎಂಬ ನಾಲ್ಕು ಬಗೆಯ ದೃಷ್ಟಾಂತಗಳ ಮೂಲಕ ವ್ಯಾಖ್ಯಾನಿಸುತ್ತಾಳೆ. ವ್ರತ ಎಂಬುದು ಅಂತರಂಗ, ಬಹಿರಂಗಗಳ ಶುದ್ಧಿಯೇ ಆಗಿದೆ. ಇಂಥ ವ್ರತದಲ್ಲಿ ನಿರತರಾಗುವುದೇ ಬದುಕಿಗೆ ರತ್ನವಿದ್ದಂತೆ, ಶ್ರೇಷ್ಠವಾದ ಮುತ್ತು ಇದ್ದಂತೆ. ಇದು ಜೀವಕ್ಕೆ–ಜೀವನಕ್ಕೆ ಕಳೆಯನ್ನು ಸೊಬಗನ್ನು ತರುತ್ತದೆ. ಇದು ಬದುಕಿನ ಒಂದು ಸುಯಿಧಾನ ಅಥವಾ ಒಳ್ಳೆಯ

ವಿಧಾನ. ಇಂಥ ಅಂತರಂಗ–ಬಹಿರಂಗ ಶುದ್ಧಿಯ ವ್ರತವನ್ನು ಹೊಂದದಿದ್ದಲ್ಲಿ ಉರಿಲಿಂಗಪೆದ್ದಿಗಳರಸ ಅಂಥ ಭಕ್ತರಿಗೆ ಒಲಿಯುವುದಿಲ್ಲ. 'ವ್ರತ' ಎಂಬ ಪದಕ್ಕೆ ತನ್ನದೇ ಆದ ಅರ್ಥವ್ಯಾಖ್ಯಾನಗಳನ್ನು ನೀಡುವ ಕಾಳವ್ವೆ ಬಸವಪೂರ್ವಯುಗದ ಬ್ರಾಹ್ಮಣ ಮತ್ತು ಜೈನಧರ್ಮದ ಆಚರಣೆಗಳಿಗೆ ಈ ಮೂಲಕ ಉತ್ತರಿಸುವ ಬಗೆ ವಿಶಿಷ್ಟವಾದುದು. ವ್ರತ ಎಂದರೆ ಬ್ರಾಹ್ಮಣರು ಆಚರಿಸುವ ಗೌರಿವ್ರತ, ಮಹಾಲಕ್ಷ್ಮಿವ್ರತ, ಸತ್ಯನಾರಾಯಣ ವ್ರತಗಳು ಅಲ್ಲ. ವ್ರತವೆಂದರೆ ಅಂತರಂಗ–ಬಹಿರಂಗ ಶುದ್ಧಿ ಎನ್ನುವ ಮೂಲಕ ಪುರೋಹಿತಶಾಹಿಗಳ ವ್ರತಾಚರಣೆಯ ಬಗೆಯನ್ನು ವಿಡಂಬಿಸುತ್ತಲೇ ಅದಕ್ಕೆ ಭಿನ್ನ ವ್ಯಾಖ್ಯಾನವನ್ನು ನೀಡುತ್ತಾಳೆ. ಹೆಣ್ಣುಮಕ್ಕಳಿಗೆ ಸಹಜವಾಗಿ ಚಿನ್ನ–ಮುತ್ತು–ರತ್ನಗಳ ಮೇಲೆ ವ್ಯಾಮೋಹವಿರುತ್ತದೆ ಎನ್ನುವ ಸಾಂಪ್ರದಾಯಿಕ ಮನೋಧರ್ಮವನ್ನು ಹೆಣ್ಣಾದ ಕಾಳವ್ವೆಯೇ ಅಲ್ಲಗಳೆಯುತ್ತಾಳೆ. ಅವಳ ದೃಷ್ಟಿಯಲ್ಲಿ ಮುತ್ತುರತ್ನಗಳೆಂಬುದು ಆಭರಣಗಳಲ್ಲ, ಅಂತಃರಂಗ ಬಹಿರಂಗ ಶುದ್ಧಿಗಳೇ ನಿಜವಾದ ಮುತ್ತುರತ್ನಗಳು. ಇದನ್ನು ಸ್ತ್ರೀ–ಪುರುಷರಾದಿಯಾಗಿ ಪರಿಭಾವಿಸಬೇಕಾದ ಸಂಗತಿಗಳೆಂಬುದನ್ನು ಅರಿಯಬೇಕಾಗುತ್ತದೆ. ಇಂಥ ವ್ರತಾಚರಣೆಯು ಜೀವದ ಕಳೆಯನ್ನು ಹೆಚ್ಚಿಸುತ್ತದೆ. ಬದುಕಿಗೆ ಇದು ಸುಯಿಧಾನ ಎಂದರೆ ಒಳ್ಳೆಯ ವಿಧಾನವೂ ಆಗಿದೆಯೆಂಬುದು ಕಾಳವ್ವೆಯ ಹಿತವಚನವಾಗಿದೆ. ಇಂಥ ವ್ರತಾಚರಣೆಯನ್ನು ಎಂಥ ಕಡು ಕಷ್ಟ ಬಂದರೂ ಭಕ್ತ ಬಿಡಬಾರದು ಎಂಬುದು ಅವಳ ತಿಳಿವಳಿಕೆ. ಹಾಗಾಗಿಯೇ ಆಕೆ ಹೀಗೆ ಹೇಳುತ್ತಿದ್ದಾಳೆ

***"ಅರ್ಥ ಪ್ರಾಣಾಭಿಮಾನದ ಮೇಲೆ ಬಂದಡೂ ಬರಲಿ***
***ವ್ರತಹೀನನನು ನೆರೆಯಲಾಗದು***
***ನೋಡಲು ನುಡಿಸಲು ಎಂತೂ ಆಗದು***
***ಹರಹರಾ, ಪಾಪವಶದಿಂದ ನೋಡಿದಡೆ***
***ರುದ್ರ, ಜಪ, ಮಾಹೇಶ್ವರಾರಾಧನೆಯ ಮಾಳ್ಪುದು***
***ಇಂತಲ್ಲದವರ ಉರಿಲಿಂಗಪೆದ್ದಿಗಳ ಅರಸ***
***ನಕ್ಕು ಕಳೆವನಮ್ಮ"***

ತಮ್ಮಲ್ಲಿನ ದ್ರವ್ಯ, ಪ್ರಾಣ, ಅಭಿಮಾನ ಇವುಗಳಿಗೆ ಧಕ್ಕೆಯಾದರೂ ವ್ರತಹೀನರೊಂದಿಗೆ ಬೆರೆಯಬಾರದು, ಅಷ್ಟೇ ಅಲ್ಲ, ಅಂಥವರನ್ನು ನೋಡಲೂ ಬಾರದು, ಮಾತನಾಡಿಸಲೂ ಹೋಗಬಾರದು ಎಂದು ನಿಷ್ಠುರವಾಗಿ ಹೇಳಿದ್ದಾಳೆ. ಕಾಳವ್ವೆಯ ಈ ಮಾತು ಸಮಾಜದ ಜನರ ನಡವಳಿಕೆಯನ್ನು ತಿದ್ದುವ ಪರಿಯೂ ಆಗಿದೆ. ಜನರ ಮನಸ್ಸಿನ ಕಲ್ಮಶವನ್ನು ಹೋಗಲಾಡಿಸುವ, ಶುದ್ಧಾಂತಃಕರಣವನ್ನು ಹೊಂದುವಂತೆ ಮಾರ್ಪಡಿಸುವ ಒಂದು ವಿಧಾನವೂ ಹೌದು. ಆ ನಿಷ್ಠುರತೆಯಿಂದ ನಡೆದುಕೊಂಡಾಗಲೇ ಇತರರೂ ಬದಲಾಗುವುದು ಎಂಬುದನ್ನು ಕಂಡುಕೊಂಡ ಕಾಳವ್ವೆಯು ಹನ್ನೊಂದನೆಯ ಶತಮಾನದ ಚಳವಳಿಯಲ್ಲಿ ಸಕ್ರಿಯವಾಗಿ ತೊಡಗಿದ್ದಂತೆ ಕಾಣುತ್ತದೆ. ಜನರನ್ನು ಅಚ್ಚಶಿವಭಕ್ತರನ್ನಾಗಿ ರೂಪಿಸುವಲ್ಲಿ ಅವಳ ಪಾತ್ರ ಮಹತ್ವದ್ದು ಎನಿಸುತ್ತದೆ. ವ್ರತಹೀನರನ್ನು ಪಾಪದ ಕಾರಣಕ್ಕೆ ನೋಡಿದ್ದೇ ಆದರೆ ಆತ ರುದ್ರ, ಜಪ, ಮಾಹೇಶ್ವರ ಆರಾಧನೆಯ ಮೂಲಕ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕೆಂಬುದು ಆಕೆಯ ನಿಲುವು. ಹಾಗೆ ಪ್ರಾಯಶ್ಚಿತ್ತ ಮಾಡಿಕೊಳ್ಳದಿದ್ದರೆ ಅಂಥವರ ಬಗ್ಗೆ ಶಿವ ನಕ್ಕು ಬಿಟ್ಟುಬಿಡುವನು ಎನ್ನುತ್ತಾಳೆ. ಅಂತರಂಗ

ಶುದ್ಧಿಯ ವ್ರತಾಚರಣೆ ಮಾಡದಿದ್ದಲ್ಲಿ ಇಷ್ಟಲಿಂಗದ ಕಳೆ ನಷ್ಟವಾಗುವುದರೊಂದಿಗೆ 'ಅವರು ಲಿಂಗವಿದ್ದೂ ಭವಿಗಳು' ಎನ್ನುತ್ತಾಳೆ. ಅಂಥವರು 'ಪ್ರಾಣವಿಲ್ಲದ ದೇಹದಂತೆ' ಎಂಬ ಉಪಮೆಯ ಮೂಲಕ ಹೇಳಿದ್ದಾಳೆ.

ಕಾಳವ್ವೆಯು ಕುಲಜ ಯಾರು? ಕುಲಹೀನ ಯಾರು? ಎಂಬ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸುವುದರೊಂದಿಗೆ ತೀಕ್ಷ್ಣ ಪ್ರತಿಭಟನೆಯ ಮೂಲಕ ಪ್ರಶ್ನಿಸುತ್ತಾಳೆ. ಆ ಕಾಲದ ವರ್ಣವ್ಯವಸ್ಥೆಯನ್ನೂ ಅದರಲ್ಲಿರುವ ವಿಪರ್ಯಾಸಗಳನ್ನು ತನ್ನ ಕಠಿಣ ಮಾತುಗಳಿಂದ ಬಯಲಿಗೆಳೆಯುತ್ತಾಳೆ. ಈ ಬಗೆಗಿನ ಅವಳ ವಚನ ಹೀಗಿದೆ :

***"ಕುರಿ ಕೋಳಿ ಕಿರಿ ಮೀನು ತಿಂಬವರಿಗೆಲ್ಲ ಕುಲಜ ಕುಲಜರೆಂದೆಂಬರು***
***ಶಿವಗೆ ಪಂಚಾಮೃತವ ಕರೆವ ಪಶುವ ತಿಂಬಮಾದಿಗ ಕೀಳುಜಾತಿಯೆಂಬರು***
***ಅವರೆಂತು ಕೀಳು ಜಾತಿಯಾದರು, ಜಾತಿಗಳು ನೀವೇಕೆ ಕೀಳಾಗಿರೊ?***
***ಬ್ರಾಹ್ಮಣನುಂಡುದು ಪುಲ್ಲಿಗೆ ಶೋಭಿತವಾಗಿ ನಾಯಿ ನೆಕ್ಕಿ ಹೋಯಿತು***
***ಮಾದಿಗರುಂಡುದು ಪುಲ್ಲಿಗೆ ಬ್ರಾಹ್ಮಣಗೆ ಶೋಭಿತವಾಯಿತು***
***ಅದೆಂತೆಂದಡೆ :***
***ಸಿದ್ದಲಿಕೆಯಾಯಿತು ಸಗ್ಗಳೆಯಾಯಿತು***
***ಸಿದ್ದಲಿಕೆಯ ತುಪ್ಪವನು, ಸಗ್ಗಳೆಯ ನೀರನು***
***ಶುದ್ಧವೆಂದು ಕುಡಿದ ಬುದ್ಧಿಗೇಡಿ ವಿಪ್ರಂಗೆ***
***ನಾಯಕ ನರಕ ತಪ್ಪದಯ್ಯ***
***ಉರಿಲಿಂಗ ಪೆದ್ದಿಗಳರಸು ಒಲ್ಲನವ್ವಾ"***

ಇಡೀ ವಚನ ಜನಸಾಮಾನ್ಯರ ಆಹಾರ ಸಂಸ್ಕೃತಿಯನ್ನು ಕೇಂದ್ರೀಕರಿಸಿಕೊಂಡು ಜಾತಿ–ಭೇದ ನೀತಿಯನ್ನು ಅನುಸರಿಸುತ್ತಿದ್ದ ಸಾಮಾಜಿಕ ವ್ಯವಸ್ಥೆಯ ವಿರುದ್ಧ ಟೀಕಾ ಪ್ರಹಾರವನ್ನು ಮಾಡಿದ್ದಾಳೆ. ಕುರಿ, ಕೋಳಿ, ಮೀನನ್ನು ತಿನ್ನುವವರನ್ನು ಕುಲಜರು ಎಂದೂ ಹಸುವನ್ನು ತಿನ್ನುವ ಮಾದಿಗ ಸಮುದಾಯವನ್ನು ಕೀಳು ಜಾತಿ ಎಂದೂ ಅಂದಿನ ಸಮಾಜ ಭಾವಿಸಿತ್ತು. ಅವರು ಹೇಗೆ ಕೀಳುಜಾತಿಯವರಾಗುತ್ತಾರೆ ಎಂಬುದು ಕಾಳವ್ವೆಯ ಪ್ರಶ್ನೆ. ಪ್ರಾಣಿ ಆಧಾರಿತ ಮಾಂಸ ಸೇವನೆಯ ಹಿನ್ನೆಲೆಯಲ್ಲಿ ಜಾತಿಗಳನ್ನು ಒಡೆಯುವ ಸಮಾಜದ ಹುನ್ನಾರಗಳನ್ನು ಮತ್ತು ಬ್ರಾಹ್ಮಣ ಸಮುದಾಯ ಗೋಮಾಂಸ ಸೇವಿಸುವ ಮಾದಿಗ ಸಮುದಾಯವನ್ನು ಕುಲಹೀನ ಎಂದು ಕರೆಯುತ್ತಿದ್ದ ವ್ಯಂಗ್ಯವನ್ನು ತನ್ನ ವಚನದ ಮೂಲಕ ಅಭಿವ್ಯಕ್ತಿಸಿದ್ದಾಳೆ. ಶಿವನಿಗೆ ಪಂಚಾಮೃತವನ್ನು ಕರೆವ ಹಸುವನ್ನು ತಿನ್ನುವ ಮಾದಿಗರನ್ನು ಕೀಳು–ಜಾತಿಯವರೆನ್ನುತ್ತಾರೆ. ಅವರು ಹೇಗೆ ಕೀಳುಜಾತಿಯವರಾಗುತ್ತಾರೆ ಎಂಬುದು ಕಾಳವ್ವೆಯ ಮೂಲಭೂತ ಪ್ರಶ್ನೆಯಾಗಿದೆ. ದನದ ಚರ್ಮದಿಂದ ಮಾಡಿದ ವಸ್ತುಗಳನ್ನು ಬ್ರಾಹ್ಮಣರು ಬಳಸುವುದರ ಬಗ್ಗೆ ಹೇಳುತ್ತಾ ಅವರ ನಡೆಯನ್ನು ವಿಡಂಬಿಸುತ್ತಾಳೆ. ಹಸುವಿನ ಚರ್ಮದಿಂದ ಮಾಡಿದ ಚೀಲದಲ್ಲಿ ಎಣ್ಣೆ–ತುಪ್ಪವನ್ನು ಒಯ್ಯಲು ಬಳಸುವುದಾಗಲೀ ನೀರನ್ನು ತುಂಬಿಸುವ ಚೀಲವಾದ ಸಗ್ಗಳೆಯನ್ನಾಗಲಿ ಬಳಸಿ ಅದರಲ್ಲಿನ ತುಪ್ಪ ಮತ್ತು ನೀರನ್ನು ಶುದ್ಧ–ಪವಿತ್ರ ಎಂದು ಸೇವಿಸುವ ವಿಪ್ರರನ್ನು ಬುದ್ಧಿಗೇಡಿಗಳು ಎನ್ನುವುದಲ್ಲದೇ ಅಂಥವರಿಗೆ

ನಾಯಕ ನರಕ ತಪ್ಪುವುದಿಲ್ಲ ಎಂದಿದ್ದಾಳೆ. ಹೀಗೆ ಹಸುವನ್ನು ಪೂಜ್ಯವೆಂದು ಭಾವಿಸುತ್ತ ಹಸು ತಿನ್ನುವ ಮಾದಿಗರನ್ನು ಕೀಳೆಂದು ಭಾವಿಸುತ್ತಾ ಹಸುವಿನ ಚರ್ಮದಿಂದ ತಯಾರಿಸಿದ ಸಿದ್ದಲಿಕೆ ಮತ್ತು ಸಗ್ಗಳೆಯಲ್ಲಿನ ತುಪ್ಪ ಮತ್ತು ನೀರನ್ನು ಪವಿತ್ರವೆಂದು ಸೇವಿಸುವ ವಿಪ್ರರ ನಡೆಯ ವಿಪರ್ಯಾಸವನ್ನು ಕಾಳವ್ವೆ ವಿಡಂಬಿಸುತ್ತಾ ಇಂಥವರನ್ನು ಉರಿಲಿಂಗಪೆದ್ದಿಗಳರಸ ಒಪ್ಪುವುದಿಲ್ಲ ಎಂದಿದ್ದಾಳೆ. ಕುಲಜರೆನಿಸಿ ತಮ್ಮ ಕುಲಕ್ಕೆ ತಕ್ಕಂತೆ ನಡೆಯದವರನ್ನು ಕುಲಜರು ಎನ್ನುವುದಾದರೆ ಸಮಾಜದ ದೃಷ್ಟಿಯಲ್ಲಿ ಹುಟ್ಟಿನಿಂದ ಕೆಳಜಾತಿಯವನು ಎಂದೆನಿಸಿ ಅವನ ಜಾತಿಯ ಆಹಾರಪದ್ಧತಿಯಂತೆ ನಡೆದುಕೊಂಡವನು ಹೇಗೆ ಕುಲಹೀನನಾಗುತ್ತಾನೆ? ಎಂಬುದು ಕಾಳವ್ವೆಯ ತಾರ್ಕಿಕ ಪ್ರಶ್ನೆಯಾಗಿದೆ. ಹಸುವನ್ನು ಪೂಜಿಸಿದ ಮೇಲೆ ಹಸುವಿನ ಚರ್ಮದಿಂದ ತಯಾರಾದ ವಸ್ತುಗಳನ್ನು ಬಳಸುವುದರ ವಿಪರ್ಯಾಸವನ್ನು ಕಾಳವ್ವೆ ತಿಳಿಸುತ್ತಾಳೆ. ಚರ್ಮದಿಂದ ತಯಾರಾದ ವಸ್ತುಗಳೂ ಅಪವಿತ್ರವಾಗಬೇಕಿತ್ತಲ್ಲವೇ? ಎಂಬುದು ಅವಳ ಪ್ರಶ್ನೆ ಮತ್ತು ವ್ಯಂಗ್ಯವಾಗಿದೆ. ಹಾಗಾಗಿ ಹಸುವಿನ ಚರ್ಮದಿಂದ ಮಾಡಿದ ಚೀಲದ ನೀರನ್ನು ಸೇವಿಸುವ ವಿಪ್ರ ಹೇಗೆ ಶ್ರೇಷ್ಠನಾಗುತ್ತಾನೆಂಬ ಮೂಲಭೂತ ಪ್ರಶ್ನೆಯನ್ನೆತ್ತುತ್ತಾಳೆ.

ಹೋಮ ಹವನದ ಹೆಸರಿನಲ್ಲಿ ಬ್ರಾಹ್ಮಣರು ಮಾಡುವ ಹಿಂಸೆಯ ವಿಡಂಬನೆಯನ್ನು ಕಾಳವ್ವೆ ಮಾಡುತ್ತಾಳೆ. ಪುರಾಣ, ಉಪನಿಷತ್‌ಗಳನ್ನು ಓದಿಕೊಂಡಿದ್ದ ಕಾಳವ್ವೆ ಕಾಲಾತೀತವಾಗಿ ಬ್ರಾಹ್ಮಣರು ಮಾಡಿಕೊಂಡು ಬಂದ ಹಿಂಸೆಯನ್ನು ಜಾಹೀರುಪಡಿಸುತ್ತಾಳೆ.

***"ಕೃತಯುಗ ಮೂವತ್ತೆರಡು ಲಕ್ಷ ವರುಷದಲ್ಲಿ ಹೋಮವನಿಕ್ಕುವಾಗ***
***ಕುಂಜರನೆಂಬ ಆನೆಯ ಕೊಂದು ಹೋಮವನಿಕ್ಕಿದರು ಬ್ರಾಹ್ಮಣರು***
***ತ್ರೇತಾಯುಗ ಹದಿನಾಱು ಲಕ್ಷ ವರುಷದಲ್ಲಿ ಬ್ರಾಹ್ಮಣರು ಹೋಮವನಿಕ್ಕುವಾಗ***
***ಮಹಿಷನೆಂಬ ಕರಿ ಎಮ್ಮೆಯ ಮಗನ ಕೊಂದು ಹೋಮವನಿಕ್ಕಿದರು***
***ದ್ವಾಪರಯುಗ ಎಂಟು ಲಕ್ಷ ವರುಷದಲ್ಲಿ ಹೋಮವನಿಕ್ಕುವಾಗ***
***ಅಶ್ವನೆಂಬ ಕುದುರೆಯ ಕೊಂದು ಹೋಮವನಿಕ್ಕಿದರು ಬ್ರಾಹ್ಮಣರು.***
***ಕಲಿಯುಗ ನಾಲ್ಕು ಲಕ್ಷ ವರುಷದಲ್ಲಿ ಹೋಮವನಿಕ್ಕುವಾಗಿ***
***ಜಾತಿಯಾಡಿನ ಮಗ ಹೋತನ ಕೊಂದು ಹೋಮವನಿಕ್ಕಿದರು ಬ್ರಾಹ್ಮಣರು.***
***"ಅಣೋರಣೀಯಾನ್ ಮಹತೋ ಮಹೀಯಾನ್" ಎಂದುದಾಗಿ***
***ಶಿವಭಕ್ತ ಹೊತ್ತರೆದ್ದು ಗುರುಲಿಂಗ ಜಂಗಮಕ್ಕೆ ಶರಣೆನ್ನದೆ***
***ಮುನ್ನ ಒಂಟಿ ಬ್ರಾಹ್ಮಣನ ಕಂಡು ಶರಣಾರ್ತಿ ಎಂದೆಡೆ***
***ಎಂಬತ್ತು ನಾಲ್ಕು ಲಕ್ಷ ಯೋನಿಯಲ್ಲಿ ಹಂದಿಯ ಬಸುರಲ್ಲಿ***
***ಬಪ್ಪುದು ತಪ್ಪದು ಕಾಣಾ ಉರಿಲಿಂಗಪೆದ್ದಿಗಳರಸ ಒಲ್ಲನವ್ವಾ"***

ಇಲ್ಲಿ ಕಾಳವ್ವೆ ಬ್ರಾಹ್ಮಣರು ಹಲವು ಯುಗಗಳಲ್ಲಿ ಮಾಡಿಕೊಂಡು ಬಂದ ಪ್ರಾಣಿವಧೆಯ ಸಂದರ್ಭಗಳನ್ನು ತಿಳಿಸಿದ್ದಾಳೆ. ಆ ಮೂಲಕ ಅವರ ಹಿಂಸಾಪ್ರವೃತ್ತಿಯನ್ನು ಬಯಲಿಗೆಳೆದಿದ್ದಾಳೆ. ಕೃತಯುಗದಲ್ಲಿ ಕುಂಜರ, ತ್ರೇತಾಯುಗದಲ್ಲಿ ಎಮ್ಮೆ, ದ್ವಾಪರಯುಗದಲ್ಲಿ ಅಶ್ವ, ಕಲಿಯುಗದಲ್ಲಿ ಹೋತಗಳನ್ನು

ಅಗ್ನಿಗೆ ಅರ್ಪಿಸಿ ಹೋಮವನ್ನು ಮಾಡಿ ಅದನ್ನು ಸೇವಿಸಿರಬಹುದಾದ ಬ್ರಾಹ್ಮಣರಿಗೆ ಮಾಂಸಾಹಾರವನ್ನು ಸೇವಿಸುವ ಇತರರನ್ನು ದೂಷಿಸುವ ನೈತಿಕತೆ ಇಲ್ಲ ಎಂಬುದನ್ನು ತಿಳಿಸಿದ್ದಾಳೆ. ಹೋಮದ ಹಿಂದಿನ ಮೌಢ್ಯವನ್ನು ಅಲ್ಲಗಳೆಯುವ ಕಾಳವ್ವೆ ಬ್ರಾಹ್ಮಣರ ಹಿಂಸಾ ಪ್ರವೃತ್ತಿಯನ್ನು ತಿಳಿಸುತ್ತಲೇ ವೀರಶೈವಧರ್ಮದ ಶ್ರೇಷ್ಠತೆಯನ್ನು, ಔಚಿತ್ಯವನ್ನು ಒತ್ತಿ ಹೇಳುತ್ತಾಳೆ. ಹೀಗಿರುವ ಬ್ರಾಹ್ಮಣನನ್ನು ಕಂಡು ಶರಣಾರ್ಥಿ ಎಂದು ನುಡಿದರೆ ಎಂಬತ್ತನಾಲ್ಕು ಲಕ್ಷ ಯೋನಿಯಲ್ಲಿ ಹಂದಿಯ ಬಸುರಲ್ಲಿ ಹುಟ್ಟುವುದು ತಪ್ಪುವುದಿಲ್ಲ ಎನ್ನುವುದಲ್ಲದೇ ಇಂಥವರನ್ನೂ ಉರಿಲಿಂಗಪೆದ್ದಿಗಳರಸ ಒಲ್ಲ ಎಂಬುದನ್ನು ಹೇಳಿದ್ದಾಳೆ. ಶಿವಭಕ್ತನಾದವನು ಗುರುಲಿಂಗ ಜಂಗಮಕ್ಕೆ ಶರಣೆನ್ನಬೇಕೇ ಹೊರತು ಬ್ರಾಹ್ಮಣನಿಗಲ್ಲ ಎಂಬುದನ್ನು ಇಲ್ಲಿ ಸೂಚಿಸುತ್ತಿದ್ದಾಳೆ. ಇಲ್ಲಿ ಅವಳ ಉಗ್ರ ಶೈವನಿಷ್ಠೆಯೂ ಎದ್ದು ಕಾಣುತ್ತದೆ.

ಧರ್ಮ–ಅಧರ್ಮಗಳನ್ನು ವ್ಯಾಖ್ಯಾನಿಸುವ ಕಾಳವ್ವೆ ಈ ಎರಡನ್ನು ಆಚರಿಸುವ ಜನರಿಗೆ ದೊರೆಯುವ ಫಲಾಫಲಗಳನ್ನು ಕುರಿತು ಹೇಳುತ್ತಾಳೆ. ಇದರೊಂದಿಗೆ ಭವಿ–ಭಕ್ತರಿಗೆ ಸಲ್ಲುವ ಪ್ರಯೋಜನಗಳನ್ನು ತಿಳಿಸುತ್ತಾಳೆ. ಸಮಾಜಸೇವೆ, ಸಜ್ಜನರ ಸಹವಾಸ, ಭಕ್ತಿ, ದಾಸೋಹಗಳಿಂದ ಮನುಷ್ಯ ಭಾಗ್ಯ ಉಳ್ಳವನಾಗುತ್ತಾನೆ. ಅಂಥ ಪುರುಷರು ಏನನ್ನು ಇಷ್ಟಪಡುತ್ತಾರೋ ಅದನ್ನು ಕಾಮಧೇನು ನೀಡುತ್ತದೆ. ಧರ್ಮವನ್ನು ಆಚರಿಸುವವನಿಗೆ ಗಾಜಿನ ಮಣಿ ಚಿಂತಾಮಣಿಯಾಗಿಯೂ ತೋರುತ್ತದೆ. ಶ್ರೀಗುರುವಿನ ಕರುಣೆಯಿರುವ ಪುರುಷನಿಗೆ ಜಂಗಮವೇ ಲಿಂಗವಾಗಿ ತೋರುತ್ತದೆ ಎಂಬುದು ಕಾಳವ್ವೆಯ ವಿಚಾರ.

ಒಟ್ಟಾರೆ ಕಾಳವ್ವೆಯ ವಚನಗಳು ವ್ರತ, ಭವಿ–ಭಕ್ತ, ಗುರು–ಲಿಂಗ–ಜಂಗಮ, ಜಾತಿ–ಭೇದಗಳನ್ನು ಕುರಿತಂತೆ ಮಾತಾಡುತ್ತವೆ. ಹನ್ನೆರಡನೆಯ ಶತಮಾನದ ಕಾಳವ್ವೆ ಬಸವಪೂರ್ವಯುಗದ ಮತ್ತು ಬಸವಯುಗದ ಆಧ್ಯಾತ್ಮಿಕ ಮತ್ತು ಲೌಕಿಕ ಸಂದರ್ಭಗಳಿಗೆ ಪ್ರತಿಕ್ರಿಯಿಸಿದ್ದಾಳೆ. ಅವಳ ಈ ಪ್ರತಿಕ್ರಿಯೆ ವ್ಯಂಗ್ಯ–ವಿಡಂಬನೆ, ಪ್ರತಿಭಟನಾತ್ಮಕ ಸ್ವರೂಪವನ್ನೊಳಗೊಂಡಿದೆ. ಆ ಕಾಲದ ಹೆಣ್ಣುಮಗಳೊಬ್ಬಳು ಹೀಗೆ ವೈಚಾರಿಕತೆಯನ್ನು ಮೈಗೂಡಿಸಿಕೊಂಡು ಜಾತ್ಯತೀತವಾದ, ಲಿಂಗಾತೀತವಾದ ಸಮಾನತೆಯ ಆಶಯವನ್ನು ವ್ಯಕ್ತಪಡಿಸಿರುವುದು ಆ ಕಾಲಕ್ಕೆ ಮತ್ತು ಈ ಕಾಲಕ್ಕೆ ಪ್ರಕೃತವೇ ಸರಿ.

**ಪರಾಮರ್ಶನ ಗ್ರಂಥಗಳು**


- ವೀರಣ್ಣ ರಾಜೂರ. (ಸಂ.). (2021). *ಶಿವಶರಣೆಯರ ವಚನ ಸಂಪುಟ, ಸಮಗ್ರ ವಚನ ಸಂಪುಟ–5.* (ನಾಲ್ಕನೇ ಆವೃತ್ತಿ). ಕನ್ನಡ ಪುಸ್ತಕ ಪ್ರಾಧಿಕಾರ.